ಕೃಷಿ ಸಾಲದ ಗುರಿ 18 ಲಕ್ಷ ಕೋಟಿ ರು.ಗೆ ಹೆಚ್ಚಳ ಸಾಧ್ಯತೆ

ದೆಹಲಿ: ಕೇಂದ್ರ ಸರಕಾರವು ಕೃಷಿ ಸಾಲದ ಗುರಿಯನ್ನು 18 ಲಕ್ಷ ಕೋಟಿ ರು.ಗಳಿಗೆ ಹೆಚ್ಚಿಸುವ ಸಾಧ್ಯತೆ ಇದೆ. ಕೃಷಿ ವಲಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಮಂಡಿಸಲಿರುವ 2022-23ನೇ ಸಾಲಿನ ಬಜೆಟ್‌ನಲ್ಲಿ ಈ ಸಬಂಧ ಅಧಿಕೃತ ಘೋಷಣೆ ಮಾಡುವ ನಿರೀಕ್ಷೆ ಇದೆ.



ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ 2021-22ನೇ ಸಾಲಿಗೆ 16.5ಲಕ್ಷ ಕೋಟಿ ರು.ಗಳ ಕೃಷಿ ಸಾಲದ ಗುರಿಯನ್ನು ಕೇಂದ್ರವು ನಿಗದಿ ಮಾಡಿಕೊಂಡಿದೆ. ಕೃಷಿ ವಲಯಕ್ಕೆ ಕೊಡುವ ಸಾಲದ ಗುರಿಯನ್ನು ಕೇಂದ್ರವು ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಿದೆ. ಈ ಪರಿಪಾಠವು ಈ ಬಾರಿಯೂ ಮುಂದುವರಿಯುವ ಸಾಧ್ಯತೆ ಇದ್ದು, ಸಾಲದ ಗುರಿಯನ್ನು 18 ಅಥವಾ 18.5 ಲಕ್ಷ ಕೋಟಿ ರು.ಗಳಿಗೆ ಹೆಚ್ಚಿಸಬಹುದು ಎಂದು ಮೂಲಗಳು ತಿಳಿಸಿವೆ.

ವಾರ್ಷಿಕ ಕೃಷಿ ಸಾಲದ ಮೊತ್ತವನ್ನು ಕೇಂದ್ರವು ನಿಗದಿ ಮಾಡುತ್ತದೆ. ಇದರಲ್ಲಿ ಬ್ಯಾಂಕ್‌ಗಳಿಂದ ನೀಡಲಾಗುವ ಬೆಳೆ ಸಾಲದ ಮೊತ್ತವೂ ಸೇರಿದೆ. ಕೃಷಿ ವಲಯಕ್ಕೆ ಕೊಡುತ್ತಿರುವ ಸಾಲದ ಮೊತ್ತವು ಈಚಿನ ವರ್ಷಗಳಲ್ಲಿ ಹೆಚ್ಚುತ್ತ ಸಾಗಿದೆ. ಕೆಲವು ವರ್ಷಗಳಲ್ಲಿ ಗುರಿಗಿಂತಲೂ ಹೆಚ್ಚಿನ ಮೊತ್ತವನ್ನು ಸಾಲವಾಗಿ ನೀಡಿದ ನಿದರ್ಶನ ಇದೆ. 'ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ಸಾಲ ನೀಡಿಕೆಯು ಮಹತ್ವದ್ದು. ಬ್ಯಾಂಕ್, ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ವಿತರಣೆ ಮಾಡಿದರೆ, ಅವರು ಹೆಚ್ಚಿನ ಬಡ್ಡಿಗೆ ಇತರರಿಂದ ಸಾಲ ಪಡೆಯುವ ಸಂಕಷ್ಟ ನಿವಾರಣೆ ಆಗುತ್ತದೆ' ಎನ್ನುತ್ತಾರೆ ತಜ್ಞರು.

04-01-2022 Vsv Pg 13

04-01-2022 Pv Pg 02

ಫಲಪುಷ್ಪ ಪ್ರದರ್ಶನ: ಗೊಂದಲದಲ್ಲಿ ತೋಟಗಾರಿಕಾ ಇಲಾಖೆ

ಬೆಂಗಳೂರು: ಜನವರಿ ಕೊನೆಯ ವಾರದಲ್ಲಿ ಲಾಲ್‌ಬಾಗ್ ಉದ್ಯಾನದಲ್ಲಿ 'ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನ' ಆಯೋಜಿಸಲು ತೋಟಗಾರಿಕೆ ಇಲಾಖೆ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಆದರೆ, ಓಮೈಕ್ರಾನ್ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಪ್ರದರ್ಶನ ಆಯೋಜಿಸುವುದೋ ಅಥವಾ ರದ್ದು ಮಾಡುವುದೋ ಎಂಬ ಗೊಂದಲಕ್ಕೆ ಇಲಾಖೆ ಸಿಲುಕಿದೆ.

ಈ ಬಾರಿ ಫಲಪುಷ್ಪ ಪ್ರದರ್ಶನವನ್ನು ನಟರಾದ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಗೌರವಾರ್ಥ ಆಯೋಜಿಸಲು ಉದ್ದೇಶಿಸಲಾಗಿತ್ತು. ಗಾಜಿನ ಮನೆಯಲ್ಲಿ ಇಬ್ಬರು ನಟರ ಹೂವಿನ ಪ್ರತಿಕೃತಿಗಳನ್ನು ನಿರ್ಮಿಸಿ, ಪುಷ್ಪನಮನ ಸಲ್ಲಿಸಲು ಎಲ್ಲ ತಯಾರಿ ನಡೆದಿದೆ. ಆದರೆ, ಕಳೆದ ವಾರದಿಂದ ಓಮೈಕ್ರಾನ್ ಸೋಂಕು ಪ್ರಕರಣಗಳು ದಿಢೀರ್ ಏರಿರುವುದರಿಂದ ಪ್ರದರ್ಶನದ ಬಗ್ಗೆ ಸ್ಪಷ್ಟತೆ ಇಲ್ಲವಾಗಿದೆ.

'ಫಲಪುಷ್ಪ ಪ್ರದರ್ಶನಕ್ಕೆ ಎರಡು ತಿಂಗಳಿನಿಂದಲೇ ಸಿದ್ಧತೆಗಳು ನಡೆದಿವೆ. ಓಮೈಕ್ರಾನ್ ಪ್ರಕರಣಗಳೂ ಏರಗತಿಯಲ್ಲಿವೆ. ಹಾಗಾಗಿ, ಜನವರಿ 10ರವರೆಗೆ ಕಾದು ನೋಡುತ್ತೇವೆ. ಸದ್ಯಕ್ಕೆ ಫಲಪುಷ್ಪ ಪ್ರದರ್ಶನ ರದ್ದು ಮಾಡಿಲ್ಲ' ಎಂದು ತೋಟಗಾರಿಕೆ ಸಚಿವ ಮುನಿರತ್ನ 'ಪ್ರಜಾವಾಣಿ'ಗೆ ತಿಳಿಸಿದರು.

In a pickle... less mangoes in market this year

ASHWINI M SRIPAD @ Bengaluru

HERE is disappointing news for lovers of the king of fruit, mango. This year, the yield will be less, which also means prices will be high. It is because of high moisture content in the soil after heavy, untimely rain last year which has led to vegetative growth and not floral growth in mango trees.

Karnataka is one of the top mango growers in the country, with 1.7 lakh hectares in 16 districts under cultivation, especially in Kolar, Chikkaballapur, Dharwad, and Ramanagar districts.



Every year, the production is around 10 lakh tonnes. But in 2020, it was 15 lakh tonnes, SV Hittalmani, former additional director of horticulture and senior horticulture scientist, told *The New Indian Express*. The production this year could be half of last year, around 8 lakh tonnes, as per initial estimates. "However, we will get the second estimation done after January 15, which will give us a clearer picture. But the yield will definitely be less than last year," he said.

Last year, the entire state, including mango-growing regions, experienced heavy rain in November which has led to high moisture content in the soil, he said. "Mango trees are giving out more leaves. In fact, the floral growth, instead of vegetative growth, should have been more around this season. With less or no flowers, the yield will naturally be low. We are expecting the mango season to start on time in March, but with a lesser number of fruits," he added.

Growers are also worried as flowers are setting late.

04-01-2022
Ind Exp Pg 01

Empowering and honouring the farmers



The union government scheme 'PM Kisan Samman Nidhi Yojana' to honour the farmers has been implemented in the state in letter and spirit. So far, a total of Rs. 37,521 crore have been transferred to nearly 2.54 crore farmers. Uttar Pradesh Kisan Samman Samridhi Aayog has also been constituted. Nearly doubling the MSP, 435 lakh metric tonnes of food grains were procured from the farmers and more than Rs 79,000 crore paid as price for the procured food grains. Under the Pradhan Mantri Fasal Bima Yojana, Rs 2,376 crore was transferred as compensation to 27.56 lakh farmers. Apart from this, 4.72 lakh crore rupees were provided them as crop loans for purchasing fertilizers and seeds.

Chief Minister Accident Assistance Scheme for traders and commission agents registered with Mandi Samitis as well as Chief Minister Mandi Fire Accident Assistance Scheme were also implemented in the interest of the farmers.. Recognizing these honest efforts and works of the state government in favour of the farmers, the Government of India has also given a Krishi Karman Award of Rs. 2 crore to the state.

Farmer's support in full development

Chief Minister Yogi Adityanath believes that the development of any state is incomplete unless the farmers are happy and prosperous. Yogi Adityanath's government pays constant attention to this and continues to work in the interest of farmers. Many government schemes have helped in increasing income of the farmers and this has also led to financial reforms in rural areas. The government ensured taking care of the farmers' needs even during the epidemic-induced lockdown periods.

Not only this, the Yogi government has introduced many beneficial policies to secure the future of the farmers. This has also boosted farmers' confidence. Bumper production of food grains, pulses, oilseeds and sugarcane may be seen as a spin-off of these pro-farmer policies.

04-01-2022
Ind Exp Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

Researchers see a new path to curbing methane in rice

ERIC ROSTON
January 3



A CUP OF tea in 2006 changed genetic engineering forever.

Jill Banfield, a University of California at Berkeley ecosystem scientist and 1999 MacArthur Foundation fellow, had become curious in 2006 about mysterious repeating DNA sequences that were common in microbes that live in some of the planet's most extreme environments, such as deep-sea heat vents, acid mines and geysers. She just needed a biochemist to help explain what the sequences known as Crispr/Cas9 were, and ideally somebody local.

The best scientist-location tool available to the highly decorated PhD researcher — a web search — recommended a Berkeley RNA specialist named Jennifer Doudna. The two met for tea at a campus lunch spot. Doudna hadn't heard of Crispr, a kind of microbial immune system, and was intrigued. So much so that over the next few years she would go on to solve the sequence's structure, which turned out to be something of a miraculous cut-and-paste tool for DNA. The discovery heralded a new era of genomics that is revolutionising science and multiple industries and earned Doudna half the 2020 Nobel Prize in chemistry.

Now, 15 years after their initial meeting, Banfield, Doudna and a large team of co-authors have published a paper that takes a major step toward solving the thorny problem of how to study and alter genomes of microbes living in complicated real-world environments, such as the gut microbiome or soil. The complexity of microbial communities has been a major obstacle to discovering technologies that can prevent diseases and improve agriculture. It's a critical step toward curbing methane, a harmful greenhouse gas that is emitted during rice production.

The work is a part of the Innovative Genomics Institute, a consortium Doudna founded to develop uses for Crispr and other genetic engineering techniques to solve problems in health, food production and elsewhere. The IGI in July received a $3 million gift from an anonymous donor to pursue climate work, and Banfield's research on microbial ecosystems is fundamental to that push.

Soil is "the most difficult ecosystem on the planet to study," Banfield said. "It's the most complex. It really was the Holy Grail to be able to get any insights into soil microbial communities." Much of the IGI's climate work is focused on the science of rice, a major source of calories for more than half the world. Beyond the primary problem of ensuring people have enough, rice also presents a significant climate challenge. The crop is grown in flooded fields. That water cuts off oxygen to the soil, which allows methane-producing microbes to thrive: Rice production is responsible for as much as 34 million tons of methane a year, or about 2% of greenhouse-gas emissions. China and India make up half that total.

Rice fields are like smokestacks for soil methane, and to shut down those emissions, scientists first need to understand the microbes. The trouble has been that culturing microbial communities and tinkering with them in a lab with traditional tools "could take years or might fail altogether," IGI authors write. Their new paper demonstrates that using a Crispr-based system can "accelerate this process to weeks."

Shutting down the rice methane spigot might require any of several alterations, either to the plants themselves or the microbial network into which the roots grow. Engineered solutions might range from introducing microbes that can eat methane in oxygen-free conditions to just flat-out eliminating specific organisms from the soil, the way antibiotics kill disease-causing bacteria.

"This is all very blue-sky at the present time," Banfield said. "First, we want to understand the pieces and how they fit together." Pamela Ronald is a University of California at Davis professor who has studied rice her entire career and written a book on the future of food. More than a decade ago she and a colleague identified the gene used to develop flood-tolerant rice that's now grown by more than 6 million farmers in India and Bangladesh.

There are more than 130,000 kinds of rice. Lurking in those genomes may be overlooked evolutionary skills that scientists could graft into agricultural varieties, for heat resistance, nutrition or disease prevention. Ronald's lab is looking for changes that, combined with Banfield's microbial communities, could lead to lower-emission crops. An even greater challenge awaits in the digestive tracts of cattle and other ruminants, which are responsible for more than 5% of global emissions. —BLOOMBERG

04-01-2022
Ind Exp Pg 10

ಪ್ರಶಸ್ತಿಗಳ ಕೊಟ್ಟಿದ್ದು ಇದೇ ನಾಡಿನ ಮಣ್ಣು

ಕೃಷಿಯಲ್ಲಿ ಲಾಭ ಇಲ್ಲ ಅಂತ ನಮ್ಮ ಪೂರ್ವಜರು ನಗರಗಳಿಗೂ ವಲಸೆ ಹೋಗಿರಲಿಲ್ಲ. ಅಷ್ಟೇ ಯಾಕೆ? ಇವರಿಗೆ ನಗರದ ವಾತಾವರಣ ಒಗ್ಗುತ್ತಲೂ ಇರಲಿಲ್ಲ. ನಷ್ಟವೆನಿಸಿದರೂ ಸಾವಿರಾರು ವರ್ಷಗಳ ಇತಿಹಾಸದ ಕೃಷಿಯನ್ನೇ ಅವಲಂಬಿಸಿಕೊಂಡು ಬರುತ್ತಿದ್ದರು. ಎಮ್ಮೆ, ಎತ್ತು, ಕುರಿ, ಕೋಳಿ ಇಲ್ಲದ ಮನೆಗಳಿರಲಿಲ್ಲ.



ಮಿಶ್ರಾ ಕೃಷಿ

ಕವಿತಾ ಮಿಶ್ರಾ

mishraformkvt@gmail.com

ನಮ್ಮ ಅಣ್ಣ ಪೇಟೆಯಲ್ಲಿದ್ದಾನೆ, ಮಾವ ಬೆಂಗಳೂರಿನಲ್ಲಿದ್ದಾರೆ, ಚಿಕ್ಕಪ್ಪ ಮುಂಬಯಿಯಲ್ಲಿದ್ದಾರೆ ಅಂತ ಅನೇಕರು ಹೇಳಿಕೊಳ್ಳುತ್ತ ಅವರಿರುವಲ್ಲಿಗೆ ಹೋಗಿ ಕೆಲಕಾಲ ಉಳಿದುಕೊಳ್ಳುತ್ತಾರೆ. ಅವರು ಉಳಿದು ಕೊಂಡಿರುವಷ್ಟೂ ದಿನ ಚೆನ್ನಾಗಿ ನೋಡಿಕೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಷಹರದಲ್ಲಿರುವವರು ಎಷ್ಟು ಹೊತ್ತು ಕೆಲಸ ಮಾಡುತ್ತಾರೆ! ಏನನ್ನು ಮಾಡುತ್ತಾರೆ? ಅನ್ನೋದೇನಾದರೂ ನಿಮಗೆ ತಿಳಿದಿರುತ್ತೇನು?

ಹೌದು, ಅವರು ಯಾವುದೋ ಪ್ರತಿಷ್ಠಿತ ಕಂಪನಿಯಲ್ಲಿಯೇ ಕೆಲಸ ಗಿಟ್ಟಿಸಿಕೊಂಡಿದ್ದಾರೆ ಅಂತ ಅಂದುಕೊಳ್ಳೋಣ. ಆದರೆ ಅವರ ಕೆಲಸ ವೇನೂ ಸುಲಭವಾಗಿರುವುದಿಲ್ಲ. ಷಹರಗಳಲ್ಲಿ ಯಾವುದೇ ವಸ್ತು ಮುಟ್ಟಿದರೂ ನೂರು, ಸಾವಿರ ಅಂತ ಬಾಯಿ ಬಡಿದುಕೊಳ್ಳುತ್ತಿರುತ್ತೆ. ಹಣ ಅವರ ಬಳಿ ಇರಬಹುದು. ಆದರೆ ಸಮಯ!? ಖಂಡಿತ ವಾಗಿಯೂ ಇರುವುದಿಲ್ಲ. ಸಾಧ್ಯವಾದರೆ ಒಮ್ಮೆ ನೀವು ಬೆಂಗಳೂರಿನ ಮೆಟ್ರೋ ನಿಲ್ದಾಣವನ್ನು ನೋಡಲೇಬೇಕು. ಎಲ್ಲರ ಕಾಲುಗಳಿಗೂ ಚಕ್ರ ಗಳಿವೆಯೇನೋ ಅಂತ ಅನಿಸುವುದರಲ್ಲಿ ನಿಸ್ಸಂಶಯ. ಇನ್ನು ಬೆಂಗಳೂರಿನ ಮೆಜೆಸ್ಟಿಕ್‌ನ ಸ್ಕೈವಾಕ್‌ಗಳ ಮೇಲೆ ಒಂದು ಗಂಟೆ ನೀವೇನಾದರೂ ನಿಂತಿದ್ದೇ ಆದರೆ ಅಲ್ಲಿ ಯಾರೂ ನೇರವಾಗಿ ಮನುಷ್ಯರ ಜತೆ ಮಾತನಾಡುವುದಿಲ್ಲ; ಬದಲಾಗಿ ಫೋನ್‌ನಲ್ಲಿಯೇ ವ್ಯವಹಾರ ನಡೆಯುತ್ತಿರುತ್ತದೆ. ಹೆಚ್ಚಿನವರ ಬಾಯಲ್ಲಿ ಸಾಮಾನ್ಯವಾಗಿ ಕೇಳುವ ಸಂಗತಿಯೆಂದರೆ, ಈ ಬಾರಿ ಕೆಲಸ ಬದಲಾವಣೆ ಮಾಡಲೇಬೇಕು, ಇಲ್ಲದಿದ್ದರೆ ಸಂಸಾರ ನಡೆಸುವುದು ಕಷ್ಟವಾಗಿಬಿಡುತ್ತೆ. ಅವರಿನ್ನೂ ನನಗೆ ಹಣ ನೀಡಲಿಲ್ಲ, ಹೀಗೆ ಹಾಗೆ... ಒಟ್ಟಿನಲ್ಲಿ ಹಣ ಬಿಟ್ಟು ಬೇರೆ ಮಾತಿಲ್ಲ. ಸಂಜೆಯ ಸಮಯವಾದರೆ ಸ್ನೇಹಿತರನ್ನು ಕುಡಿಯುವುದಕ್ಕೆ ಕರೆಯುವ ಮಧ್ಯ ವಯಸ್ಸಿನ ಯುವಕರು. ಖಂಡಿತವಾಗಿಯೂ ನೀವು ಯಾವುದೇ ರೈತರ ಮನೆಗೆ ಹೋದರೂ ಅಥವಾ ಯಾವುದೇ ಹಳ್ಳಿಗೆ ಹೋದರೂ ನಿಮಗೆ ಈ ಅನುಭವವಾಗುವುದಿಲ್ಲ.

ರೈತರ ಬದುಕಿನ ಚೆಂದವನ್ನು ನಾವು ನೋಡ ಬೇಕೆಂದರೆ ಮಲೆನಾಡಿನ ಭಾಗಗಳಿಗೆ ಹೋಗ ಬೇಕು. ಪೇಟೆಯಲ್ಲಿ ಲಕ್ಷಗಟ್ಟಲೆ ತಿಂಗಳ ಸಂಭಾವನೆ ಇರುವವನಿಗೂ ಇಲ್ಲಿಯೇ ಇದ್ದುಬಿಡೋಣ ಅಂತ ಅನಿಸಿಬಿಡುತ್ತೆ. ಬೆಳಗ್ಗೆ ಎದ್ದು ಕೊಟ್ಟಿಗೆ ಕೆಲಸ ಮಾಡಿ, ಸ್ನಾನ ಸಂಧ್ಯಾವಂದನೆಯನ್ನು ಮುಗಿಸಿ ಚಳಿಯಿದ್ದರೆ ಬಿಸಿಲಿಗೆ ಕೆಲಕಾಲ ಮೈಯೊಡ್ಡಿ ನಂತರ ತೋಟಕ್ಕೆ ಹೋದರೆ ಮನೆಗೆ ಮಧ್ಯಾಹ್ನ ಬಂದು ಊಟ ಮುಗಿಸಿ ಒಂದೆರಡು ತಾಸು ನಿದ್ರೆ ಮಾಡಿ ಎಳುತ್ತಾರೆ. ಬಳಿಕ ಚಾ/ಕಾಫಿ ಕುಡಿದು ಮತ್ತೊಮ್ಮೆ ತೋಟಕ್ಕೆ ಹೋಗಿಬರುತ್ತಾರೆ. ಸಂಜೆ ಯಾಗುತ್ತಿದ್ದಂತೆ ಅಕ್ಕಪಕ್ಕದ ಮನೆಗಳಿಗೆ ಹೋಗಿ ಲೋಕಾಭಿರಾಮ ಮಾತನಾಡಿ ಬಂದರೆಂದರೆ ಅವರ ದಿನಚರಿ ಮುಗಿದಂತೆಯೆ. ನೆಂಟರು ಇಷ್ಟರು ಬಂದರೆಂದರೆ ಅವರು ಉಪಚರಿಸುವ ಬಗೆ ಇದೆಯಲ್ಲ, ಆಹಾ... ಅದೊಂದು ಅದ್ಭುತ. ನೀವೂ ಒಮ್ಮೆ ಮಲೆನಾಡಿಗೆ ಭೇಟಿ ನೀಡಿ.

ನಾವು ವಿದ್ಯಾರ್ಥಿಗಳಾಗಿದ್ದಾಗ ನಮ್ಮ ಶಿಕ್ಷಕರು ಹೇಳುತ್ತಿದ್ದ ನೆನಪು, ನಮ್ಮದು ಕೃಷಿ ಪ್ರಧಾನ ದೇಶವಾಗಿದ್ದು ಶೇ.70ರಷ್ಟು ಜನ ಕೃಷಿಯನ್ನೇ ಅವಲಂಬಿಸಿಕೊಂಡಿದ್ದಾರೆ ಅಂತ. ಆಗ ಹೊಟ್ಟೆ ತುಂಬಿಸಿಕೊಳ್ಳಲು, ಬದುಕಲು ಅನ್ನ ಬೆಳೆಯುತ್ತಿದ್ದರು. ಆದರೆ ಈಗ ಸನ್ನಿವೇಶ ಬದಲಾಗಿದೆ. ಹೊಸ ತಾಂತ್ರಿಕತೆಯಿಂದಾಗಿ ಹಣ ಮಾಡೋಕೆ ಅನ್ನವನ್ನು ಬೆಳೆಯುತ್ತಿದ್ದಾನೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯ ನಂತರದ ಹಲವು ವರ್ಷಗಳಲ್ಲಿ ಸಾಂಪ್ರದಾಯಿಕ ಕೃಷಿ ಪದ್ಧತಿಗಳು ಹಾಗೂ ದೇಶೀ ಬೀಜಗಳನ್ನು ಬಳಸಲಾಗುತ್ತಿತ್ತು. ಒಮ್ಮೆ ಬೀಜವನ್ನು ಬಿತ್ತನೆ ಮಾಡಿದರೆ ಹಲವು ವರ್ಷಗಳವರೆಗೆ ಅದೇ ಬೀಜವನ್ನೇ ಪುನಃ ಪುನಃ ಬಳಸಲಾಗುತ್ತಿತ್ತು. ಇದರಿಂದಾಗಿ ಕೃಷಿಯಲ್ಲಿ ನಾವು ನಿರೀಕ್ಷಿಸಿದಷ್ಟು ಬದಲಾವಣೆ ಕಾಣಲಾಗುತ್ತಿರಲಿಲ್ಲ. ಕೃಷಿ ಮೆಚ್ಚಕ್ಕೆ ಹೋಲಿಸಿದರೆ ಬರುವ ಇಳುವರಿ ಲಾಭದಾಯಕವಾಗಿರಲಿಲ್ಲ, ಹಾಗಾಗಿ ಕೃಷಿ ಲಾಭದಾಯಕ ಉದ್ಯೋಗವಾಗಿ ಉಳಿದುಕೊಂಡಿರಲಿಲ್ಲ. ಇದರ ಜತೆಗೆ ನೀರಾವರಿಯ ಸೌಲಭ್ಯವೂ ಈಗಿನಂತಿರಲಿಲ್ಲ, ಬಹುತೇಕ ಕೃಷಿಯು ಮಳೆಯನ್ನೇ ಆಧಾರ ಮಾಡಿಕೊಂಡಿರುತ್ತಿತ್ತು. ಹಾಗಂತ ಕೃಷಿಯಲ್ಲಿ ಲಾಭ ಇಲ್ಲ ಅಂತ ನಮ್ಮ ಪೂರ್ವಜರು ನಗರಗಳಿಗೂ ವಲಸೆ ಹೋಗಿರಲಿಲ್ಲ. ಅಷ್ಟೇ ಯಾಕೆ? ಇವರಿಗೆ ನಗರದ ವಾತಾವರಣ ಒಗ್ಗುತ್ತಲೂ ಇರಲಿಲ್ಲ. ನಷ್ಟವೆನಿಸಿದರೂ ಸಾವಿರಾರು ವರ್ಷಗಳ ಇತಿಹಾಸವಿರುವ ಕೃಷಿಯನ್ನೇ ಅವಲಂಬಿಸಿಕೊಂಡು ಬರುತ್ತಿದ್ದರು. ಆಗ ಪ್ರತಿ ಗ್ರಾಮದಲ್ಲೂ ಎಮ್ಮೆ, ಎತ್ತು, ಕುರಿ, ಕೋಳಿ ಇಲ್ಲದ ಮನೆಗಳಿರಲಿಲ್ಲ. ಅದಕ್ಕಾಗಿಯೇ ಸರ್ವಜ್ಞ, 'ಒಕ್ಕಲಿಲ್ಲದ ಊರು, ಮಕ್ಕಳಿಲ್ಲದಾ ಮನೆ, ಲೆಕ್ಕವಿಲ್ಲದವನ ಬೇಹಾರ ಈ ಮೂರು ದುಃಖ ಕಾಣಯ್ಯಾ' ಅಂತ ಹೇಳಿದ್ದ.

ನಂತರ ಬದಲಾದ ಸನ್ನಿವೇಶದಲ್ಲಿ, ಸರಕಾರ ಅನೇಕ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದು ಕೃಷಿಗೆ ಒಂದಿಷ್ಟು ಚೈತನ್ಯವನ್ನು ನೀಡುವ ಕಾರ್ಯವನ್ನು ಪ್ರಾರಂಭಿಸಿ ಮುಂದುವರಿದ ಭಾಗವಾಗಿ ಈಗ ಅನೇಕ ಸಂಶೋಧನೆಗಳು, ಆವಿಷ್ಕಾರಗಳು ನಡೆದು ಹಲವು ಅಧಿಕ ಇಳುವರಿಯ ತಳಿಗಳು ಸೃಷ್ಟಿಯಾಗಿವೆ. ನಮ್ಮ ಕೃಷಿ ವಿಶ್ವವಿದ್ಯಾಲಯಗಳ ನಿರಂತರ ಪರಿಶ್ರಮದಿಂದಾಗಿ ಹಲವು ಜಿಲ್ಲೆಗಳಲ್ಲಿ ಅದ್ಭುತ ಕೃಷಿ ಇಳುವರಿ ದೊರೆಯುವಂತಾಗಿದೆ. ಕೃಷಿ ತಾಂತ್ರಿಕತೆಯಲ್ಲಿಯೂ ಈಗ ಹಿಂದೆ ಬೀಳುತ್ತಿಲ್ಲ. ಈಗಂತೂ ಹಲವು ಕೃಷಿ ಯಂತ್ರೋಪಕರಣಗಳಿಂದಾಗಿ ರೈತನ ಅಧಿಕ ದೈಹಿಕ ಶ್ರಮವೂ ಬೇಕಾಗಿಲ್ಲ. ಉಳುಮೆಯಿಂದ ಹಿಡಿದು ಬೆಳೆ ಒಕ್ಕುವುದರವರೆಗೆ ಕೃಷಿ ಕಾರ್ಮಿಕರ ಕೊರತೆ ನೀಗಿಸಲು ಯಂತ್ರಗಳ ಬಳಕೆಯಿಂದ ಭಾರತದಲ್ಲಿ ಸಾಕಷ್ಟು ಸುಧಾರಣೆಗಳು ಕಾಣುತ್ತಿದೆ.

ಒಮ್ಮೆ ವಿನಯ್ ಮೊಜುಂದಾರ್ ಎಂಬ ವ್ಯಕ್ತಿ ಶ್ರೀಗಂಧ ಬೆಳೆಯುವುದಕ್ಕಾಗಿ ಮಾಹಿತಿ ಕೊಡಿ ಎಂದು ಬಂದಿದ್ದ. ನಂತರ ನನ್ನ ಪರಿಚಿತರಾಗಿದ್ದ ಇಸ್ಕಾನ್ ಟೆಂಪಲ್‌ನ ಗುರೂಜಿಗಳಿಂದ ಮಾತನಾಡಿಸಿ, ಬೆಳಗಾವಿಯಲ್ಲಿದ್ದ ಅವರ ಜಮೀನಿಗೆ ಬರುವಂತೆ ಕೋರಿಕೊಂಡಿದ್ದ. ಸರಿ ಅಂತ ದಿನವೊಂದನ್ನು ಗೊತ್ತು ಮಾಡಿ ಬೆಳಗಾವಿಗೆ ಪ್ರಯಾಣ ಮಾಡಿದ್ದೆ. ಅವರ ಮನೆ ತಲುಪಲು ಸುಮಾರು 25 ಕಿಲೋಮೀಟರ್ ಇದೆ ಅನ್ನುವಾಗ ಅಲ್ಲೊಂದು ಕಾರು ನಿಂತಿತ್ತು. ಅಲ್ಲಿಂದ ಅವರದ್ದೇ ಟಾಟಾ ಸುಮೋ ಕಾರಿನಲ್ಲಿ ನಮ್ಮನ್ನು ಕರೆದುಕೊಂಡು ಹೋದ ನೆನಪು. ಅತ್ಯಂತ ದುರ್ಗಮವಾಗಿದ್ದ ಬೆಟ್ಟ ಗುಡ್ಡಗಳಿಂದಾವೃತವಾದ ಕಡಿದಾದ ದಾರಿ ಅದಾಗಿತ್ತು. ಗಿಡಮರಗಳನ್ನು ತರಚಿ ಗಾಡಿ ಮುಂದೆ ಸಾಗುತ್ತಿತ್ತು. ಬರೀ ಕಾಡಾದ ಆ ಪ್ರದೇಶದಲ್ಲಿ ಕೃಷಿ ಭೂಮಿಯೇ ಕಾಣುತ್ತಿಲ್ಲ. ಆತ ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಾನೆಂದೇ ತಿಳಿಯುತ್ತಿರಲಿಲ್ಲ. ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀರಿ ಅಂತಲೂ ಕೇಳುವಂತಿರಲಿಲ್ಲ ಆ ಪರಿಸ್ಥಿತಿ. ಸುಮಾರು 15 ಕಿಲೋಮೀಟರ್ ಸಾಗಿದ ನಂತರ ವಾಹನ ನಿಂತಿತ್ತು. ಅಲ್ಲಿಯೇ ನಮ್ಮನ್ನು ಇಳಿಸಿ, 'ಕ್ಷಮಿಸಿ ಮೇಡಂ. ಇಲ್ಲಿಂದ ಮುಂದೆ ನಮ್ಮ ವಾಹನ ಹೋಗುವುದಿಲ್ಲ'ವೆಂದು ಹೇಳಿ ಅಲ್ಲೇ ಮುಂದಿದ್ದ ಟ್ರ್ಯಾಕ್ಟರ್ ಹತ್ತಿಸಿದ. 'ಯಾಕಾದರೂ ನಾನು ಇಸ್ಕಾನ್ ಸ್ವಾಮೀಜಿಗಳ ಮಾತನ್ನು ಕೇಳಿ ಇಲ್ಲಿ ಬಂದೆನಪ್ಪಾ ದೇವರೇ' ಅಂತ ಅನಿಸುತ್ತಿದ್ದರೂ ಏನನ್ನೂ ಮಾಡುವ ಪರಿಸ್ಥಿತಿಯಲ್ಲಿರಲಿಲ್ಲ. ಸುಮಾರು 2 ಕಿಲೋ ಮೀಟರ್ ಟ್ರ್ಯಾಕ್ಟರಿನಲ್ಲಿ ಪ್ರಯಾಣಿಸುತ್ತಿದ್ದಂತೆ ಅತ್ಯಂತ ಸುಂದರವಾದ ಕಾಡಿನಿಂದಾವೃತವಾದ 'ಚಂದಗಡ'ದ ತುತ್ತತುದಿಯಲ್ಲಿದ್ದೇನೆಂದು ತಿಳಿದಿತ್ತು. ನಿಸರ್ಗದ ಸೊಬಗೇ ಅಂತ ಹದ್ದು. ನಮ್ಮ ಕಷ್ಟಗಳನ್ನೂ ಮರೆಸುತ್ತೆ. ಆಸೆ ಆಕಾಂಕ್ಷೆಗಳು ಅಂತಹಾ ಪ್ರದೇಶದಲ್ಲಿ ಯಾವುದೂ ನೆನಪಿಗೆ ಬರುವುದಿಲ್ಲ. ಆ ಪ್ರದೇಶದಲ್ಲಿ ನನ್ನನ್ನು



ಇಳಿಸಿ, 'ಮೇಡಂ, ಇಲ್ಲಿ ಶ್ರೀಗಂಧ ಬೆಳೆಯಬೇಕೆಂದಿದ್ದೇನೆ. ಬೆಳೆಸಬಹುದಾ?' ಎಂದು ಪ್ರಶ್ನಿಸಿದ್ದ. ಆ ದುರ್ಗಮ ರಸ್ತೆಯಲ್ಲಿ ಬರುತ್ತಿರುವಾಗಲೇ ಆತನಿಗೆ, ನೈಸರ್ಗಿಕವಾಗಿಯೇ ಬೆಳೆದಿರುವ ಶ್ರೀಗಂಧವನ್ನು ಆತನ ಗಮನಕ್ಕೆ ತಂದಿದ್ದೆ. ಅವನು ಪ್ರಶ್ನಿಸಿದಾಗ 'ಈ ಪ್ರದೇಶಕ್ಕೆ ಬರಬೇಕೆಂದರೆ ಇಷ್ಟೊಂದು ಶ್ರಮ ಬೇಕಾಗುತ್ತೆ, ಇನ್ನು ಈ ಜಾಗದಲ್ಲಿ ಶ್ರೀಗಂಧವನ್ನು ಬೆಳೆಸಬೇಕಾದರೆ ಕೃಷಿ ಕಾರ್ಮಿಕರು ಹೇಗೆ ಬರುತ್ತಾರೆ?' ಎಂದು ಕೇಳಿದ್ದೆ. ಅದಕ್ಕವನು, 'ಮೇಡಂ ಈ ಭಾಗಗಳಲ್ಲಿ ನಮ್ಮ ಹೊಲಗಳ ಕೆಲಸಕ್ಕೆ ಪಾರ್ಟ್ ಟೈಂಗೆ ಜನರು ಸಿಗುತ್ತಾರೆ' ಅಂತ ಹೇಳಿದ. ಆದರೆ ಅಷ್ಟಕ್ಕೇ ನಮ್ಮ ಮಾತು ನಿಲ್ಲಲಿಲ್ಲ. ಮುಂದಿನ ಮಾತುಗಳನ್ನು ಕೇಳುತ್ತಿದ್ದಂತೆ ನಾನು ದಂಗಾಗಿಹೋಗಿದ್ದೆ. ಅಲ್ಲಿ ಸಿಗುವ ಪಾರ್ಟ್ ಟೈಂ ಕಾರ್ಮಿಕರೆಂದರೆ ಅವರೇನು ಸಾಮಾನ್ಯದವರಾಗಿರಲಿಲ್ಲ. ಅವರೆಲ್ಲರೂ ಬೆಳಗಾವಿ, ಗೋವಾದಲ್ಲಿ ಮೆಡಿಕಲ್ ಎಂಜಿನಿಯರಿಂಗ್, ಮ್ಯಾನೇಜಮೆಂಟ್ ಕೋರ್ಸ್ ಮಾಡುತ್ತಿರುವ ವಿದ್ಯಾರ್ಥಿಗಳಾಗಿದ್ದರು. ಹಣಕಾಸಿನ ತೊಂದರೆಗಾಗಿ ಊರಿಗೆ ಬಂದಾಗ ಕೃಷಿ ಕೆಲಸಗಳನ್ನು ಮಾಡಿ ಹಣ ಸಂಪಾದನೆ ಮಾಡಿಕೊಳ್ಳುತ್ತಿದ್ದರು. ಅದಾಗಲೇ ಈ ಪ್ರದೇಶದಿಂದ ಅನೇಕ ವೈದ್ಯರು, ಎಂಜಿನಿಯರುಗಳು ಹೊರಬಿದ್ದಿದ್ದಾರೆಂದು ತಿಳಿದು ಆಶ್ಚರ್ಯವಾಗಿತ್ತು. ಓದಿಗಾಗಿ ಕಷ್ಟಪಟ್ಟು ಹಣಸಂಪಾದನೆ ಮಾಡುವ ವರನ್ನು ಮೊದಲ ಬಾರಿಗೆ ನೋಡಿ ತುಂಬಾ ಸಂತೋಷವಾಗಿತ್ತು. ಓದಿಗಾಗಿ ದುಡುಯುತ್ತಿರುವುದು ವಿಪರ್ಯಾಸವೆಂದು ಅನಿಸಿದ್ದೂ ಸುಳ್ಳಲ್ಲ.

ಯಾವುದೇ ಫಲಾಪೇಕ್ಷೆಗಳಿಲ್ಲದೆ ಕೆಲಸ ಮಾಡುವ ಅನೇಕ ರಾಷ್ಟ್ರಮಟ್ಟದ ಸಂಘಟನೆಗಳಿವೆ. ಅವುಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವೂ ಒಂದು. ಇದರಲ್ಲಿ ಸಣ್ಣವರಿಂದ ಹಿಡಿದು ಪ್ರತಿಷ್ಠಿತ ಹುದ್ದೆಯಲ್ಲಿರುವಂತಹಾ ಮಹಿಳೆಯರೂ ದೇಶ ಸೇವೆಗೆ ತಮ್ಮ ಇತರ ಕಾರ್ಯಗಳ ಮಧ್ಯೆಯೂ ಕಾರ್ಯನಿರ್ವಹಿಸುತ್ತಾರೆ. ಇಂತಹಾ ಬಲಿಷ್ಠ ಸಂಘಟನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಕಾ ಮೇಡಂ ನನ್ನನ್ನೊಮ್ಮೆ ದೆಹಲಿಗೆ ಬರಲು ಸಕಲ ವ್ಯವಸ್ಥೆಗಳನ್ನೂ ಮಾಡಿದ್ದರು. ರಾಯಚೂರಿನಿಂದ ದೆಹಲಿಗೆ ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ಬಂದುಹೋಗುವ ವ್ಯವಸ್ಥೆಯನ್ನು ಮಾಡಿದ್ದರೂ ನಾವು ರೈಲ್ವೇ ಸ್ಟೇಶನ್ನಿಗೆ ಹೋಗುವಷ್ಟರಲ್ಲಿ ಟ್ರೈನ್ ಹೋಗಿ ಎರಡು ನಿಮಿಷಗಳಾಗಿತ್ತು. ಆಗ, ಅಲ್ಕಾ ಮೇಡಂಗೆ ಕರೆ ಮಾಡಿ ನಡೆದ ವಿಚಾರವನ್ನು ಹೇಳಿದಾಗ, 'ತಪ್ಪಿದರೇನಂತೆ? ಹೈದಾರಾಬಾದಿನ ಮೂಲಕ ವಿಮಾನದಲ್ಲಿ ಬರಬಹುದಲ್ಲ!' ಅಂತ ಹೇಳಿ ನಾವು ಹೈದರಾಬಾದಿಗೆ ಸಮೀಪಿಸುವ ಮೊದಲೇ ಎಲ್ಲ ತಯಾರಿಯನ್ನೂ ಮಾಡಿಯಾಗಿತ್ತು. ದೆಹಲಿಗೆ ಪ್ರಯಾಣ ಮಾಡಲು ಮಿಂಚಿನ ವೇಗದಲ್ಲಿ ನಮಗೆ ಆರ್‌ಎಸ್‌ಎಸ್ ಸಕಲ ಸಿದ್ಧತೆಗಳನ್ನೂ ಮಾಡಿತ್ತು.

ದೆಹಲಿಯಲ್ಲಿ ಆರ್‌ಎಸ್‌ಎಸ್‌ನ ಬೃಹತ್ ಮಹಿಳಾ ಸಮಾವೇಶ ಅದಾಗಿತ್ತು. ಅಲ್ಲಿ ಬಂದಿದ್ದ ಹಲವು ಗಣ್ಯ ವ್ಯಕ್ತಿಗಳ ಪೈಕಿ ಮೋಹನ್ ಭಾಗವತರು ಒಬ್ಬರಾಗಿದ್ದು ಅವರನ್ನು ಭೇಟಿ ಮಾಡುವ ಅವಕಾಶ ನನಗೆ ಲಭಿಸಿದ್ದು ಸಂತೋಷವಾಗಿತ್ತು. ಅದೇ ಕಾರ್ಯಕ್ರಮದಲ್ಲಿ ನನಗೆ 'ರಾಷ್ಟ್ರೀಯ ಪ್ರೇರಣಾ ದೀಪ್' ಪ್ರಶಸ್ತಿ ಪ್ರಧಾನ ಮಾಡಿದ್ದರು. ಅಲ್ಲಿ ಹಲವು ರಾಜ್ಯಗಳ ಮಹಿಳಾ ರಾಜ್ಯಪಾಲರುಗಳನ್ನು ಭೇಟಿ ಮಾಡುವ ಅವಕಾಶ ನನಗೆ ದೊರೆತದ್ದು ಇದೇ ಮಣ್ಣಿನಿಂದಲೇ ಅಂತ ತಿಳಿದು ಇನ್ನೂ ಹೆಮ್ಮೆಯೆನಿಸಿತು.

ಒಮ್ಮೆ ಮುಂಬಯಿ ದೂರದರ್ಶನದಿಂದ ಮನವರ್ ಅಲಿಯವರಿಂದ ಕರೆ ಬಂದಿತ್ತು. 'ಮೇಡಂ, ತಮ್ಮ ಜೀವನದ ಟೆಲಿ ಫಿಲ್ಮ್ ಮಾಡಲು ಮುಂಬಯಿ ದೂರದರ್ಶನ ಆಸಕ್ತಿ ಹೊಂದಿದೆಯೆಂದು ತಿಳಿಸಿ, ಇದಕ್ಕಾಗಿ ನಮ್ಮ ಕಲಾಕಾರರ ತಂಡದೊಂದಿಗೆ ಬರುವುದಾಗಿ ತಿಳಿಸಿದ್ದರು. ಅದರಂತೆ ಆ ತಂಡದ ನಿರ್ದೇಶರು, ತಾಂತ್ರಿಕಾ ತಜ್ಞರು, ಕ್ಯಾಮೆರಾಮನ್, ಕಲಾಕಾರರು ನಿಗದಿತ ಸಮಯಕ್ಕೆ ಬಂದಿದ್ದರು. ನನ್ನನ್ನು ಹೋಲುವ ಹುಡುಗಿಯೊಬ್ಬಳನ್ನು ಮಧ್ಯಪ್ರದೇಶದಿಂದ ಕರೆತಂದಿದ್ದರು. ಆಶ್ಚರ್ಯವೆಂದರೆ ಈ ಹುಡುಗಿಯನ್ನು ನನ್ನನ್ನು ಹೋಲುವ ಸುಮಾರು 60 ಜನರಲ್ಲಿ ಆಯ್ಕೆ ಮಾಡಲಾಗಿತ್ತು. ಹೆಚ್ಚುವರಿಯಾಗಿ ಸ್ಥಳೀಯ ಕಲಾವಿದರನ್ನೇ ಬಳಸಿಕೊಳ್ಳುವಂತೆ ಹೇಳಿದ್ದರಿಂದ ನಮ್ಮಲ್ಲಿಯೇ ಇರುವ ಕಲಾ ಪ್ರತಿಭೆ ಮಲಕೇಶ್ ಅವರನ್ನು ಪರಿಚಯಿಸಿದ್ದೆ. ಅವರು ಕಲಾವಿದರನ್ನು ಹುಡುಕಿ ಸ್ವತಃ ತಾವೂ ಒಂದು ಪಾತ್ರವನ್ನು ನಿರ್ವಹಿಸಿದ್ದರು. ಕವಿತಾಳ ಊರಿನ ಸುತ್ತಮುತ್ತಲಿನ ಪ್ರದೇಶಗಳನ್ನು ಶೂಟಿಂಗ್ ಮಾಡಿ, ಶ್ರೀಗಂಧ ಬೆಳೆಯ ಬಗ್ಗೆ ಹೆಚ್ಚಿನ ಗಮನ ನೀಡಿದ್ದರಿಂದ ಟೆಲಿ ಫಿಲ್ಮ್ ಅದ್ಭುತವಾಗಿ ಮೂಡಿಬಂದಿತ್ತು.

ನಂತರ ಈ ಟೆಲಿಫಿಲ್ಮ್ 'ಚೋಲೋ ಆಸ್ಮಾನ್' ಎಂಬ ಜನಪ್ರಿಯ ಕಾರ್ಯಕ್ರಮದಲ್ಲಿಯೂ ಮೂಡಿಬಂದಿತ್ತು. ದೇಶದ ಪ್ರತಿಭಾನ್ವಿತ ರೈತರನ್ನು ಪರಿಚಯಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇ